KAVP210046652025

Presented on : 25-09-2025
Registered on : 25-09-2025
Decided on : 19-06-2026

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಬಸವನ ಬಾಗೇವಾಡಿ .**

**-:ಉಪಸ್ಥಿತರು:-**

ಶ್ರೀ ಈರಪ್ಪ ಢವಳೇಶ್ವರ್ ಬಿ.ಎ. ಎಲ್.ಎಲ್.ಬಿ,
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,
ಬಸವನ ಬಾಗೇವಾಡಿ .

**ಸಿ.ಸಿ. ನಂ.3259/2025**

ದಿನಾಂಕಃ **19** ನೇ ಜೂನ **2026**

ಫಿರ್ಯಾದಿಃ ರಾಜ್ಯದ ಪರವಾಗಿ ಪೊಲೀಸ್ ವೃತ್ತ ನಿರೀಕ್ಷಕರು,
ನಿಡಗುಂದಿ .

(ಪ್ರತಿನಿಧಿಸುವವರುಃ ಸಹಾಯಕ ಸರ್ಕಾರಿ ಅಭಿಯೋಜಕರು)

-ವಿರುದ್ಧ-

ಆರೋಪಿ-
ಶ್ಯಾಮ ತಾಯಿ ಹನುಮವ್ವ ದೊಡಮನಿ
ವಯಾಃ 42 ವರ್ಷ, ಉಃ ಚಾಲಕ
ಸಾಃ ತಗ್ಗಿ, ತಾಃ ಬೀಳಗಿ
ಜಿಃ ಬಾಗಲಕೋಟ

(ಪ್ರತಿನಿಧಿಸುವವರುಃಶ್ರೀ ಜಿ. ಎನ್.ಬಿ, ನ್ಯಾಯವಾದಿಗಳು)

| | | |
|---|---|---|
| 1 | ಅಪರಾಧ ನಡೆದ ದಿನಾಂಕ | 21.07.2025 |
| 2 | ಅಪರಾಧ ವರದಿಯಾದ ದಿನಾಂಕ | 21.07.2025 |
| 3 | ಆರೋಪಿಯನ್ನು ಬಂಧಿಸಿದ ದಿನಾಂಕ | 30.07.2025 |
| 4 | ಫಿರ್ಯಾದಿಯ ಹೆಸರು | ಸಿದ್ದವ್ವ ಹುಲ್ಲಪ್ಪ ಕಲಗೊಂಡ |
| 5 | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 08.06.2026 |
| 6 | ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | 08-06-2026 |
| 7 | ಆರೋಪಿಸಲಾದ ಅಪರಾಧಗಳು | ಭಾರತೀಯ ನ್ಯಾಯ ಸಂಹಿತೆ ಕಲಂ 281 ಹಾಗೂ 106(1) ಹಾಗೂ ಮೋಟರ ವಾಹನ ಕಾಯ್ದೆ ಕಲಂ: 3 ಸಹ ಕಲಂ:181 ಹಾಗೂ 146 ಸಹಕಲಂ:196 |
| 8 | ನ್ಯಾಯಾಧೀಶರ ಅಭಿಪ್ರಾಯ | ಭಾರತೀಯ ದಂಡ ಸಂಹಿತೆ ಕಲಂ 281 ಹಾಗೂ 106(1) ಕ್ಕೆ ಆರೋಪಿ ನಿರಪರಾಧಿ<br>ಮೋಟರ ವಾಹನ ಕಾಯ್ದೆ ಕಲಂ: 3 ಸಹ ಕಲಂ:181 ಹಾಗೂ ಕಲಂ: 146 ಸಹಕಲಂ:196 ಕ್ಕೆ ಅಪರಾಧಿ |

**-ಃ ತೀರ್ಪು ಃ-**

ನಿಡಗುಂದಿ ಪೊಲೀಸ್ ವೃತ್ತ ನಿರೀಕ್ಷಕರು ಆರೋಪಿಯ ವಿರುದ್ದ ದೋಷಾರೋಪಣೆ ಪತ್ರವನ್ನು ಸಲ್ಲಿಸಿ ಆರೋಪಿಯು ಭಾರತೀಯ ನ್ಯಾಯ ಸಂಹಿತೆ ಕಲಂ **281** ಹಾಗೂ **106(1)** ಹಾಗೂ ಮೋಟರ ವಾಹನ ಕಾಯ್ದೆ ಕಲಂ: **3** ಸಹ ಕಲಂ:**181** ಹಾಗೂ ಕಲಂ: **146** ಸಹಕಲಂ:**196** ರ ಅಡಿಯಲ್ಲಿ ಕೃತ್ಯವೆಸಗಿದ್ದಾರೆಂದು ಆರೋಪಿಸಿರುತ್ತಾರೆ**.**

2. ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ:-

ದಿನಾಂಕ **21-07-2025** ರಂದು ಸಂಜೆ **7-20** ಗಂಟೆಯ ಸಮಯದಲ್ಲಿ ಕೋಲಾರ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ವಿಜಯಪೂರ – ಬಾಗಲಕೋಟ ಎನ್ ಎಚ್ **-52** ರಸ್ತೆಯ ಮೇಲೆ ರೋಣಿಹಾಳ ಕ್ರಾಸ ಹತ್ತಿರ ಇರುವ ಗುರಪ್ಪ ತಂದೆ ಸಿದ್ದಪ್ಪ ಚಲವಾದಿರವರ ಜಮೀನಿನ ಹತ್ತಿರ ಆರೋಪಿತನು ಅಧಿಕೃತ ವಾಹನ ಚಾಲನಾ ಪರವಾನಿಗೆ ಪತ್ರ ಹೊಂದದೇ ಹಾಗೂ ನಡೆಸುವ ವಾಹನಕ್ಕೆ ಯಾವುದೇ ವಿಮಾ ಪಾಲಸಿ ಮಾಡಿಸದೇ ಕಾರ ನಂ: ಕೆಎ**-28/**ಬಿ**-**

**8702** ನೇದ್ದನ್ನು ಎನ್ ಎಚ್ **52** ರಸ್ತೆಯ ಮೇಲೆ ಅತಿ ವೇಗ ಹಾಗೂ ಅಜಾಗರೂಕತೆಯಿಂದ ಮಾನವನ ಜೀವಕ್ಕೆ ಅಪಾಯಕಾರಿಯಾಗುವಂತೆ ನಡೆಸಿಕೊಂಡು ಬಂದು ರೋಣಿಹಾಳ ಕ್ರಾಸ ಹತ್ತಿರ ನಡೆದುಕೊಂಡು ರಸ್ತೆಯನ್ನು ಕ್ರಾಸ ಮಾಡುತ್ತಿದ್ದ ಚಾಸಾ**-1** ರವರ ತಾಯಿ ಲಕ್ಕಮ್ಮ ಗಂಡ ನಾಗಪ್ಪ ನೇಗಿನಾಳ ಇವಳಿಗೆ ಹಾಯಿಸಿ ಅಪಘಾತ ಪಡಿಸಿ ಅವಳ ತಲೆಯ ಹಿಂಬದಿಗೆ ತೀವ್ರ ಸ್ವರೂಪದ ಗಾಯಗಳಾಗಿ ಉಪಚಾರ ಸಮಯದಲ್ಲಿ ರೋಣಿಹಾಳ ಗ್ರಾಮದ ಸರಕಾರಿ ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ. ಹಾಗಾಗಿ ಆರೋಪಿಯು ಭಾರತೀಯ ನ್ಯಾಯ ಸಂಹಿತೆ ಕಲಂ **281** ಹಾಗೂ **106(1)** ಹಾಗೂ ಮೋಟರ ವಾಹನ ಕಾಯ್ದೆ ಕಲಂ: **3** ಸಹ ಕಲಂ:**181** ಹಾಗೂ ಕಲಂ: **146** ಸಹಕಲಂ:**196** ರ ಅಡಿಯಲ್ಲಿ ಅಪರಾಧ ಎಸಗಿರುತ್ತಾನೆ ಎಂದು ಆರೋಪಿಸಲಾಗಿದೆ.

**3.** ಆರೋಪಿ ವಿರುದ್ದ ದೋಷಾರೋಪಣ ಪತ್ರ ಸಲ್ಲಿಸಿದ ನಂತರ, ಆರೋಪಣಾ ಸಂಜ್ಞೇಯವನ್ನು ತೆಗೆದುಕೊಳ್ಳಲಾಯಿತು. ಆರೋಪಿಯು ನ್ಯಾಯಾಲಯದ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದು, ಆರೋಪಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ **207** ರ ಅಡಿಯಲ್ಲಿ ದೋಷಾರೋಪಣ ಪತ್ರದ ನಕಲುಗಳನ್ನು ಪೂರೈಸಲಾಯಿತು. ತದನಂತರ ಆರೋಪಿ ವಿರುದ್ಧ ಆಪಾದನೆಯನ್ನು ರಚಿಸಿ ಅವರಿಗೆ ಓದಿ ಹೇಳಿ ವಿವರಿಸಲಾಗಿ, ಆರೋಪಿ ತಪ್ಪು ಮಾಡಿಲ್ಲವೆಂದು ಹೇಳಿದ್ದರಿಂದ ಪ್ರಕರಣವನ್ನು ಸಾಕ್ಷಿದಾರರ ವಿಚಾರಣೆಗಾಗಿ ಹಾಕಿಕೊಳ್ಳಲಾಗಿತ್ತು.

**4.** ಆರೋಪಿ ವಿರುದ್ದದ ಆರೋಪವನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯವರು ತಮ್ಮ ಪರವಾಗಿ ದೋಷಾರೋಪಣ ಪತ್ರದಲ್ಲಿ ಒಟ್ಟು **15** ಜನ ಸಾಕ್ಷಿದಾರರನ್ನು ತೋರಿಸಲಾಗಿದ್ದು, ಅವರಲ್ಲಿ ಪ್ರಾಸಾ.**1** ರಿಂದ **06** ಎಂದು ವಿಚಾರಣೆ ಮಾಡಿ ನಿಪಿ.**1** ರಿಂದ **13** ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

**5.** ಆರೋಪಿಯ ವಿರುದ್ದದ ಆರೋಪಗಳನ್ನು ರುಜುವಾತುಪಡಿಸುವಂತಹ ಯಾವುದೇ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯಾಧಾರಗಳು ಈ ಪ್ರಕರಣದಲ್ಲಿ ಕಂಡುಬರದಿದ್ದ ಕಾರಣ, ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿ ವಿರುದ್ದದ ಅಭಿಯೋಜನೆ ಪಕ್ಷದ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯದ ಬಗ್ಗೆ ಪ್ರಶ್ನಿಸುವ ಹಂತವನ್ನು ಕೈಬಿಡಲಾಗಿದೆ. ನಂತರ ಆರೋಪಿತರು ದಂಡ ಪ್ರಕ್ರಿಯಾ ಸಂಹಿತೆ ಕಲಂ.437(ಎ) ರಡಿಯಲ್ಲಿನ ಪ್ರಕ್ರಿಯೆಯಂತೆ ಜಾಮೀನಿನ ಭದ್ರತೆಯನ್ನು ನೀಡಿರುತ್ತಾರೆ.

**6.** ಉಭಯ ಪಕ್ಷಗಾರರ ಪರ ವಕೀಲರ ವಾದ ವಿವಾದಗಳನ್ನು ಆಲಿಸಲಾಯಿತು.

7. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳು ಈ ನ್ಯಾಯಾಲಯದ ಪರಿಶೀಲನೆಗೆ ಉದ್ಭವಿಸಿರುತ್ತವೆ:-

ಅಂಶಗಳು

1. ದಿನಾಂಕ: ದಿನಾಂಕ **21-07-2025** ರಂದು ಸಂಜೆ **7-20** ಗಂಟೆಯ ಸಮಯದಲ್ಲಿ ಕೋಲಾರ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ವಿಜಯಪೂರ – ಬಾಗಲಕೋಟ ಎನ್ ಎಚ್ **-52** ರಸ್ತೆಯ ಮೇಲೆ ರೋಣಿಹಾಳ ಕ್ರಾಸ ಹತ್ತಿರ ಇರುವ ಗುರಪ್ಪ ತಂದೆ ಸಿದ್ದಪ್ಪ ಚಲವಾದಿರವರ ಜಮೀನಿನ ಹತ್ತಿರ ಆರೋಪಿಯು ಕಾರ ನಂ: ಕೆಎ**-28/**ಬಿ**-8702** ನೇದ್ದನ್ನು ಎನ್ ಎಚ್ **52** ರಸ್ತೆಯ ಮೇಲೆ ವಾಹನವನ್ನು ಅತಿ ವೇಗ ಹಾಗೂ ಅಜಾಗರೂಕತೆಯಿಂದ ಮಾನವನ ಜೀವಕ್ಕೆ ಅಪಾಯಕಾರಿಯಾಗುವಂತೆ ನಡೆಸಿಕೊಂಡು ಹೋಗಿ ಅಪಘಾತ ಪಡಿಸಿರುತ್ತಾರೆ. ಹಾಗಾಗಿ ಆರೋಪಿಯು ಭಾರತೀಯ ನ್ಯಾಯ ಸಂಹಿತೆ ಕಲಂ.281 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾನೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ?

2 ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿಯು ಕಾರ ನಂ: ಕೆಎ**-28/**ಬಿ**-8702** ನೇದ್ದನ್ನು ಎನ್ ಎಚ್ **52** ರಸ್ತೆಯ ಮೇಲೆ ವಾಹನವನ್ನು ಅತಿ ವೇಗ ಹಾಗೂ ನಿಸ್ಕಾಳಜಿತನದಿಂದ ಮಾನವೀಯ ಜೀವಕ್ಕೆ ಅಪಾಯಕಾರಿಯಾಗುವಂತೆ ಚಾಲನೆ ಮಾಡಿಕೊಂಡು ಬಂದು ರೋಣಿಹಾಳ ಕ್ರಾಸ ಹತ್ತಿರ ನಡೆದುಕೊಂಡು ರಸ್ತೆಯನ್ನು ಕ್ರಾಸ ಮಾಡುತ್ತಿದ್ದ ಚಾಸಾ**-1** ರವರ ತಾಯಿ ಲಕ್ಕಮ್ಮ ಗಂಡ ನಾಗಪ್ಪ ನೇಗಿನಾಳ ಇವಳಿಗೆ ಹಾಯಿಸಿ ಅಪಘಾತ ಪಡಿಸಿ ಅವಳ ತಲೆಯ ಹಿಂಬದಿಗೆ ತೀವ್ರ ಸ್ವರೂಪದ ಗಾಯಗಳಾಗಿ ನಂತರ ಸದರಿಯವರು ಮರಣ ಹೊಂದಿರುತ್ತಾರೆ. ಹಾಗಾಗಿ ಆರೋಪಿಯು ಭಾರತೀಯ ನ್ಯಾಯ ಸಂಹಿತೆ ಕಲಂ. 106(1) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾನೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ?

**3.** ಅದೇ ದಿನ**,** ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿಯ ವಾಹನದ ಚಾಲನೆಯ ಪರವಾನಿಗೆ ಪತ್ರವನ್ನು ಹೊಂದದೇ ಕಾರನ್ನು ಜೋರಾಗಿ ನಿರ್ಲಕ್ಷತನದಿಂದ ನಡೆಯಿಸಿಕೊಂಡು ಅತೀ ವೇಗವಾಗಿ ಚಾಲನೆ

ಮಾಡಿಕೊಂಡು ಹೋಗಿರುತ್ತಾನೆ. ಕಾರಣ ಆರೋಪಿಯು ಮೋಟಾರ ವಾಹನ ಕಾಯ್ದೆ ಕಲಂ: **3** ಸಹ ಕಲಂ: **181** ರ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ**?**

**4.** ಅದೇ ದಿನ**,** ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿಯು ತಾನು ಚಾಲನೆ ಮಾಡುವ ವಾಹನದ ವಿಮೆಯನ್ನು ಮಾಡದೇ ಕಾರನ್ನು ಜೋರಾಗಿ ನಿರ್ಲಕ್ಷತನದಿಂದ ನಡೆಯಿಸಿಕೊಂಡು ಅತೀ ವೇಗವಾಗಿ ಚಾಲನೆ ಮಾಡಿಕೊಂಡು ಹೋಗಿ ಅಪಘಾತಪಡಿಸಿರುತ್ತಾನೆ**.** ಕಾರಣ ಆರೋಪಿಯು ಮೋಟಾರ ವಾಹನ ಕಾಯ್ದೆ ಕಲಂ:**146** ಸಹ ಕಲಂ: **196** ರ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ**?**

5. ಹಾಗಿದ್ದರೆ ಯಾವ ಆಜ್ಞೆ?

8. ಮೇಲ್ಕಂಡ ಅಂಶಗಳಿಗೆ ಈಲ ನ್ಯಾಯಾಲಯದ ಉತ್ತರ ಈ ಕೆಳಕಂಡ ಕಾರಣಗಳಿಂದ ಈ ರೀತಿ ಇದೆ:-

ಅಂಶ ಸಂಖ್ಯೆ-1 : ನಕಾರಾತ್ಮಕವಾಗಿ
ಅಂಶ ಸಂಖ್ಯೆ-2 : ನಕಾರಾತ್ಮಕವಾಗಿ
ಅಂಶ ಸಂಖ್ಯೆ-3 : ಸಕಾರಾತ್ಮಕವಾಗಿ
ಅಂಶ ಸಂಖ್ಯೆ-4 : ಸಕಾರಾತ್ಮಕವಾಗಿ
ಅಂಶ ಸಂಖ್ಯೆ-5 :ಅಂತಿಮ ಆದೇಶದಂತೆ:

-: ಕಾ ರ ಣ ಗ ಳು :-

**9.** ಅಂಶ ಸಂಖ್ಯೆ **1** ಮತ್ತು **2** : ಈ ಎರಡು ಅಂಶಗಳು ಒಂದಕ್ಕೊಂದು ಆಂತರಿಕ ಸಂಬಂಧ ಹೊಂದಿರುವುದರಿಂದ ವಿಷಯದ ಪುನರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ ಈ ಎರಡು ಅಂಶಗಳನ್ನು ಜೊತೆಗೂಡಿಸಿ ಒಟ್ಟಿಗೆ ಚರ್ಚಿಸಿರುತ್ತೇನೆ.

10. ಆರೋಪಿಯ ವಿರುದ್ಧದ ಆರೋಪವನ್ನು ರುಜುವಾತುಪಡಿಸುವ ಸಲುವಾಗಿ ದೋಷಾರೋಪಣಾ ಪಟ್ಟಿಯಲ್ಲಿ ಚಾಸಾ.1 ರಿಂದ 15 ರವರನ್ನು ಸಾಕ್ಷಿದಾರರನ್ನಾಗಿ ನಮೂದಿಸಿರುತ್ತಾರೆ. ಅದರಲ್ಲಿ ಪ್ರಾಸಾ.1 ರಿಂದ 6 ರವರನ್ನು ಸಾಕ್ಷಿದಾರರನ್ನಾಗಿ ವಿಚಾರಣೆ ಮಾಡಿರುತ್ತಾರೆ. ಅಂತೆಯೇ ಅಭಿಯೋಜನೆಯ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿಶಾನೆ ಪಿ.1 ರಿಂದ ನಿಶಾನೆ ಪಿ.13 ರವರೆಗೆ ದಾಖಲಾತಿಗಳನ್ನು ನಿಶಾನಿಸಿರುತ್ತಾರೆ.

11. ಈ ಪ್ರಕರಣದಲ್ಲಿ ಆರೋಪಿಯ ವಿರುದ್ಧ ದಿನಾಂಕ **21-07-2025** ರಂದು ಸಂಜೆ **7-20** ಗಂಟೆಯ ಸಮಯದಲ್ಲಿ ಕೋಲಾರ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ವಿಜಯಪೂರ – ಬಾಗಲಕೋಟ ಎನ್ ಎಚ್ **-52** ರಸ್ತೆಯ ಮೇಲೆ ರೋಣಿಹಾಳ ಕ್ರಾಸ ಹತ್ತಿರ ಇರುವ ಗುರಪ್ಪ ತಂದೆ ಸಿದ್ದಪ್ಪ ಚಲವಾದಿರವರ ಜಮೀನಿನ ಹತ್ತಿರ ಆರೋಪಿತನು ಅಧಿಕೃತ ವಾಹನ ಚಾಲನಾ ಪರವಾನಿಗೆ ಪತ್ರ ಹೊಂದದೇ ಹಾಗೂ ನಡೆಸುವ ವಾಹನಕ್ಕೆ ಯಾವುದೇ ವಿಮಾ ಪಾಲಸಿ ಮಾಡಿಸದೇ ಕಾರ ನಂ: ಕೆಎ**-28**/ಬಿ**-8702** ನೇದ್ದನ್ನು ಎನ್ ಎಚ್ **52** ರಸ್ತೆಯ ಮೇಲೆ ಅತಿ ವೇಗ ಹಾಗೂ ಅಜಾಗರೂಕತೆಯಿಂದ ಮಾನವನ ಜೀವಕ್ಕೆ ಅಪಾಯಕಾರಿಯಾಗುವಂತೆ ನಡೆಸಿಕೊಂಡು ಬಂದು ರೋಣಿಹಾಳ ಕ್ರಾಸ ಹತ್ತಿರ ನಡೆದುಕೊಂಡು ರಸ್ತೆಯನ್ನು ಕ್ರಾಸ ಮಾಡುತ್ತಿದ್ದ ಚಾಸಾ**-1** ರವರ ತಾಯಿ ಲಕ್ಕಮ್ಮ ಗಂಡ ನಾಗಪ್ಪ ನೇಗಿನಾಳ ಇವಳಿಗೆ ಹಾಯಿಸಿ ಅಪಘಾತ ಪಡಿಸಿ ಅವಳ ತಲೆಯ ಹಿಂಬದಿಗೆ ತೀವ್ರ ಸ್ವರೂಪದ ಗಾಯಗಳಾಗಿ ಉಪಚಾರ ಸಮಯದಲ್ಲಿ ರೋಣಿಹಾಳ ಗ್ರಾಮದ ಸರಕಾರಿ ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ. ಹಾಗಾಗಿ ಆರೋಪಿಯು ಭಾರತೀಯ ನ್ಯಾಯ ಸಂಹಿತೆ ಕಲಂ: 281 ಹಾಗೂ 106(1) ಹಾಗೂ ಮೋಟರ ವಾಹನ ಕಾಯ್ದೆ ಕಲಂ:**3** ಸಹ ಕಲಂ: **181** ಹಾಗೂ ಕಲಂ:**146** ಸಹ ಕಲಂ: **196** ರ ಅಡಿಯಲ್ಲಿ ಅಪರಾಧ ಎಸಗಿರುತ್ತಾನೆಂದು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

12. ಈ ಪ್ರಕರಣದಲ್ಲಿ ಫಿರ್ಯಾದಿ ಸಾಕ್ಷಿದಾರರಾದ ಚಾಸಾ.1 ರವರನ್ನು ಪ್ರಾಸಾ.1 ಎಂದು ಸಾಕ್ಷ್ಯ ಮಾಡಿದ್ದು, ಸದರಿ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಪ್ರಕರಣದಲ್ಲಿ ತಾನು ಚಾಸಾ-1 ಇರುತ್ತೇನೆ. ಚಾಸಾ-8 ಮತ್ತು 9 ತನ್ನ ಮಕ್ಕಳು. ಮೃತ ಲಕ್ಕಮ್ಮ ಗಂಡ ನಾಗಪ್ಪ ನೇಗಿನಾಳ ತನ್ನ ತಾಯಿ. ಆರೋಪಿ ತನಗೆ ಗೊತ್ತಿಲ್ಲ. ಸದರಿ ಪ್ರಕರಣದ ಕುರಿತು ತನಗೆ ಯಾವುದೇ ಮಾಹಿತಿ ಇಲ್ಲ. ಸುಮಾರು 1 ವರ್ಷದ ಹಿಂದೆ ಕೊಲ್ಹಾರ ಪೊಲೀಸ್ ಠಾಣೆಯಲ್ಲಿ ಒಂದು ದಾಖಲಾತಿಗೆ ಹೆಬ್ಬಟ್ಟಿನ ಗುರುತನ್ನು ಹಾಕಿರುತ್ತೇನೆ. ಸದರಿ ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಯಿತು ಎಂದು ತನಗೆ ಗೊತ್ತಿಲ್ಲ. ಸದರಿ ಅಪಘಾತದ ಬಗ್ಗೆ ಯಾವುದೇ ತನಗೆ ಮಾಹಿತಿ ಇಲ್ಲ. ನಿಪಿ -1 ರಲ್ಲಿ ಬರೆದಿರುವ ಅಂಶಗಳು ತನಗೆ ಗೊತ್ತಿಲ್ಲ ಎಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದಾಗ್ಯೂ ಸಹ ಯಾವುದೇ ಉಪಯುಕ್ತವಾದ ಮಾಹಿತಿಯನ್ನು ಹೊರತರಲು ಸಾಧ್ಯವಾಗಿರುವುದಿಲ್ಲ.

13. ಈ ಪ್ರಕರಣದ ಸ್ಥಳ ಮತ್ತು ಅಮಾನತ್ತು ಮಹಜರ್ ಸಾಕ್ಷಿದಾರರಾದ ಚಾಸಾ.4 ರವರನ್ನು ಪ್ರಾಸಾ.2 ಎಂದು ಹಾಗೂ ಚಾಸಾ-5 ರವರನ್ನು ಪ್ರಾಸಾ-3 ಎಂದು ಸಾಕ್ಷ್ಯ ಮಾಡಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ-2 ಸ್ಥಳ ಪಂಚನಾಮೆ ಮತ್ತು ನಿಪಿ-3 ಜಪ್ತು ಪಂಚನಾಮೆ ಮೇಲಿರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ . ಆದರೆ ಪೊಲೀಸರು ತಮ್ಮ ಸಮಕ್ಷಮದಲ್ಲಿ ಯಾವುದೇ ಪಂಚನಾಮೆಗಳನ್ನು ಮಾಡಿರುವುದಿಲ್ಲ ಮತ್ತು ಯಾವುದೇ ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ತಮಗೆ ನಿಪಿ-2 ಮತ್ತು 3 ರಲ್ಲಿ ಬರೆದಿರುವ ಅಂಶಗಳ ಬಗ್ಗೆ ಗೊತ್ತಿಲ್ಲ. ನಿಪಿ-4 ರಿಂದ 7 ರ ಛಾಯಾ ಚಿತ್ರಗಳಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿದ್ದು, ನಿಪಿ-4 ರಿಂದ 7 ರ ಛಾಯಾಚಿತ್ರಗಳನ್ನು ಎಲ್ಲಿ ಮತ್ತು ಯಾವ ಉದ್ದೇಶಕ್ಕಾಗಿ ತೆಗೆದಿರುತ್ತಾರೆ ಎಂಬುದು ತಮಗೆ ಗೊತ್ತಿಲ್ಲ ಎಂದು ಅಭಿಯೋಜನೆ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಗಳೆಂದು ಪರಿಗಣಿಸಿ ಪಾಟೀ ಸವಾಲು ಮಾಡಿದಾಗ್ಯೂ ಕೂಡಾ ಸದರಿ ಸಾಕ್ಷಿದಾರರ ಸಾಕ್ಷ್ಯದಿಂದ ಯಾವುದೇ ಉಪಯುಕ್ತವಾದ ಮಾಹಿತಿಗಳನ್ನು ಹೊರತಲು ಸಾಧ್ಯವಾಗಿರುವುದಿಲ್ಲ.

14. ಈ ಪ್ರಕರಣದಲ್ಲಿ ಸಾಂಧರ್ಬಿಕ ಸಾಕ್ಷಿದಾರರಾದ ಚಾಸಾ-6 ರವರನ್ನು ಪ್ರಾಸಾ.4 ಎಂದು ಸಾಕ್ಷ್ಯ ಮಾಡಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿಈ ಪ್ರಕರಣದಲ್ಲಿ ಚಾಸಾ-1 ತನ್ನ ಅಕ್ಕ. ಚಾಸಾ-8 ಮತ್ತು 9 ರವರು ತನ್ನ ಮಾವನ ಮಕ್ಕಳು. ಮೃತ ಲಕ್ಕಮ್ಮ ಗಂಡ ನಾಗಪ್ಪ ನೇಗಿನಾಳ ತನ್ನ ತಾಯಿ. ಆರೋಪಿ ತನಗೆ ಗೊತ್ತಿಲ್ಲ. ಸದರಿ ಪ್ರಕರಣದ ಕುರಿತು ತನಗೆ ಯಾವುದೇ ಮಾಹಿತಿ ಇಲ್ಲ. ಸದರಿ ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಯಿತು ಎಂದು ಗೊತ್ತಿಲ್ಲ. ತಾನು ಪೊಲೀಸರ ಮುಂದೆ ಈ ಪ್ರಕರಣದ ಕುರಿತು ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ ಎಂದು ಅಭಿಯೋಜನೆ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಗಳೆಂದು ಪರಿಗಣಿಸಿ ಪಾಟೀ ಸವಾಲು ಮಾಡಿದಾಗ್ಯೂ ಕೂಡಾ ಸದರಿ ಸಾಕ್ಷಿದಾರರ ಸಾಕ್ಷ್ಯದಿಂದ ಯಾವುದೇ ಉಪಯುಕ್ತವಾದ ಮಾಹಿತಿಗಳನ್ನು ಹೊರತಲು ಸಾಧ್ಯವಾಗಿರುವುದಿಲ್ಲ.

15. ಈ ಪ್ರಕರಣದಲ್ಲಿ ಪ್ರತ್ಯಕ್ಷ್ಯ ಸಾಕ್ಷಿದಾರರಾದ ಚಾಸಾ-7 ರವರನ್ನು ಪ್ರಾಸಾ.5 ಎಂದು ಸಾಕ್ಷ್ಯ ಮಾಡಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ-1, 6, 8 ಮತ್ತು 9 ರವರ ಪರಿಚಯ ಇರುತ್ತದೆ. ಮೃತ ಲಕ್ಕಮ್ಮ ಗಂಡ ನಾಗಪ್ಪ ನೇಗಿನಾಳ ತನಗೆ ಗೊತ್ತಿಲ್ಲ. ಆರೋಪಿ ತನಗೆ ಗೊತ್ತಿಲ್ಲ. ಸದರಿ ಪ್ರಕರಣದ ಕುರಿತು ತನಗೆ ಯಾವುದೇ ಮಾಹಿತಿ ಇಲ್ಲ. ಸದರಿ ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಯಿತು ಎಂದು ತನಗೆ ಗೊತ್ತಿಲ್ಲ. ತಾನು ಪೊಲೀಸರ ಮುಂದೆ ಈ ಪ್ರಕರಣದ ಕುರಿತು ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ ಎಂದು ಅಭಿಯೋಜನೆ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಗಳೆಂದು ಪರಿಗಣಿಸಿ ಪಾಟೀ ಸವಾಲು ಮಾಡಿದಾಗ್ಯೂ ಕೂಡಾ ಸದರಿ ಸಾಕ್ಷಿದಾರರ ಸಾಕ್ಷ್ಯದಿಂದ ಯಾವುದೇ ಉಪಯುಕ್ತವಾದ ಮಾಹಿತಿಗಳನ್ನು ಹೊರತಲು ಸಾಧ್ಯವಾಗಿರುವುದಿಲ್ಲ.

16. ಈ ಪ್ರಕರಣದಲ್ಲಿ ಇನ್ನೊರ್ವ ಪ್ರತ್ಯಕ್ಷ್ಯ ಸಾಕ್ಷಿದಾರರಾದ ಚಾಸಾ-8 ರವರನ್ನು ಪ್ರಾಸಾ.6 ಎಂದು ಸಾಕ್ಷ್ಯ ಮಾಡಿದ್ದು, ಪ್ರಾಸಾ-6 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ-1 ತನ್ನ ತಾಯಿ. ಚಾಸಾ-6 ತನ್ನ ಮಾವ. ಚಾಸಾ-9 ತನ್ನ ಅಣ್ಣ. ಮೃತ ಲಕ್ಕಮ್ಮ ಗಂಡ ನಾಗಪ್ಪ ನೇಗಿನಾಳ ತನಗೆ ಅಜ್ಜಿಯಾಗಬೇಕು. ಆರೋಪಿ ತನಗೆ ಗೊತ್ತಿಲ್ಲ. ಸದರಿ ಪ್ರಕರಣದ ಕುರಿತು ತನಗೆ ಯಾವುದೇ ಮಾಹಿತಿ ಇಲ್ಲ. ಸದರಿ ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಯಿತು ಎಂದು ತನಗೆ ಗೊತ್ತಿಲ್ಲ. ತಾನು ಪೊಲೀಸರ ಮುಂದೆ ಈ ಪ್ರಕರಣದ ಕುರಿತು ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ ಎಂದು ಅಭಿಯೋಜನೆ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಗಳೆಂದು ಪರಿಗಣಿಸಿ ಪಾಟೀ ಸವಾಲು ಮಾಡಿದಾಗ್ಯೂ ಕೂಡಾ ಸದರಿ ಸಾಕ್ಷಿದಾರರ ಸಾಕ್ಷ್ಯದಿಂದ ಯಾವುದೇ ಉಪಯುಕ್ತವಾದ ಮಾಹಿತಿಗಳನ್ನು ಹೊರತಲು ಸಾಧ್ಯವಾಗಿರುವುದಿಲ್ಲ.

17. ಅಭಿಯೋಜನೆಯ ಪರವಾಗಿ ಈ ಮೇಲ್ಕಂಡ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ಕೆಳಕಂಡಂತೆ ದಾಖಲಾತಿಗಳನ್ನು ನಿಶಾನಿಸಿರುತ್ತಾರೆ:-

ನಿಪಿ.1 ರಂತೆ ದೂರನ್ನು, ನಿಪಿ-2 ರಂತೆ ಅಪಘಾತ ನಡೆದ ಸ್ಥಳದಲ್ಲಿ ಜರುಗಿಸಿದ ಸ್ಥಳ ಮಹಜರು ಪ್ರಕ್ರಿಯೆಯಾಗಿರುತ್ತದೆ. ನಿಪಿ-3 ರಂತೆ ವಾಹನಗಳ ಅಮಾನತ್ತ ಮಹಜರನ್ನು, ನಿಪಿ-4 ರಿಂದ 7 ರಂತೆ ಛಾಯಾ ಚಿತ್ರಗಳನ್ನು, ನಿಪಿ-8 ರಿಂದ 10 ರಂತೆ ಪ್ರಾಸಾ-4 ರಿಂದ 6 ರವರು ಅಲ್ಲಗಳೆದ ಹೇಳಿಕೆ ಭಾಗಗಳನ್ನು, ನಿಪಿ-11 ರಂತೆ ಶವ ಪಂಚನಾಮೆಯನ್ನು, ನಿಪಿ-12 ರಂತೆ ಶವ ಪರೀಕ್ಷಾ ವರದಿಯನ್ನು, ನಿಪಿ-13 ರಂತೆ ಮೋಟರ ವಾಹನ ಪರೀಕ್ಷಾ ವರದಿಯನ್ನು ಹಾಜರುಪಡಿಸಿರುತ್ತಾರೆ.

18. ಅಪಘಾತವು ದಿನಾಂಕ **21-07-2025** ರಂದು ಸಂಜೆ **7-20** ಗಂಟೆಯ ಸಮಯದಲ್ಲಿ ಕೋಲಾರ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ವಿಜಯಪೂರ – ಬಾಗಲಕೋಟ ಎನ್ ಎಚ್ **-52** ರಸ್ತೆಯ ಮೇಲೆ ರೋಣಿಹಾಳ ಕ್ರಾಸ ಹತ್ತಿರ ಇರುವ ಗುರಪ್ಪ ತಂದೆ ಸಿದ್ದಪ್ಪ ಚಲವಾದಿರವರ ಜಮೀನಿನ ಹತ್ತಿರ ಆರೋಪಿತನು ಅಧಿಕೃತ ವಾಹನ ಚಾಲನಾ ಪರವಾನಿಗೆ ಪತ್ರ ಹೊಂದದೇ ಹಾಗೂ ನಡೆಸುವ ವಾಹನಕ್ಕೆ ಯಾವುದೇ ವಿಮಾ ಪಾಲಸಿ ಮಾಡಿಸದೇ ಕಾರ ನಂ: ಕೆಎ-**28**/ಬಿ-**8702** ನೇದ್ದನ್ನು ಎನ್ ಎಚ್ **52** ರಸ್ತೆಯ ಮೇಲೆ ಅತಿ ವೇಗ ಹಾಗೂ ಅಜಾಗರೂಕತೆಯಿಂದ ಮಾನವನ ಜೀವಕ್ಕೆ ಅಪಾಯಕಾರಿಯಾಗುವಂತೆ ನಡೆಸಿಕೊಂಡು ಬಂದು ರೋಣಿಹಾಳ ಕ್ರಾಸ ಹತ್ತಿರ ನಡೆದುಕೊಂಡು ರಸ್ತೆಯನ್ನು ಕ್ರಾಸ ಮಾಡುತ್ತಿದ್ದ ಚಾಸಾ-**1** ರವರ ತಾಯಿ ಲಕ್ಕಮ್ಮ ಗಂಡ ನಾಗಪ್ಪ ನೇಗಿನಾಳ ಇವಳಿಗೆ ಹಾಯಿಸಿ ಅಪಘಾತ ಪಡಿಸಿ ಅವಳ ತಲೆಯ ಹಿಂಬದಿಗೆ ತೀವ್ರ ಸ್ವರೂಪದ ಗಾಯಗಳಾಗಿ ಉಪಚಾರ ಸಮಯದಲ್ಲಿ ರೋಣಿಹಾಳ ಗ್ರಾಮದ ಸರಕಾರಿ ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ. ಸದರಿ ಅಪಘಾತವು ಆರೋಪಿತನ ತಪ್ಪಿನಿಂದ ಆಗಿರುತ್ತದೆ. ಆ ಕಾರಣದಿಂದ ಆರೋಪಿಯನ್ನು ಅಪರಾಧಿ ಎಂದು ನಿರ್ಣಯಿಸಿ ಕಠಿಣ ಶಿಕ್ಷೆಯನ್ನು ವಿಧಿಸಬೇಕೆಂದು ಅಭಿಯೋಜನೆಯ ಪರ ವಾದವಾಗಿರುತ್ತದೆ.

19. ಇದಕ್ಕೆ ಪ್ರತಿಯಾಗಿ ಮಾನ್ಯ ಆರೋಪಿ ಪರ ವಕೀಲರು ಅಪಘಾತ ಸಂಭವಿಸಿದ ಸಮಯದಲ್ಲಿ ಆರೋಪಿತನು ಅಪಘಾತಕ್ಕೆ ಕಾರಣವಾದ ವಾಹನವನ್ನು ನಿಧಾನವಾಗಿ ಚಾಲನೆ ಮಾಡಿಕೊಂಡು ಬರುತ್ತಿದ್ದು, ಅಭಿಯೋಜನೆಯವರು ವಿಚಾರಣೆಗೆ ಒಳಪಡಿಸಿದ ಯಾವುದೇ

ಸಾಕ್ಷಿದಾರರು ಅಭಿಯೋಜನೆ ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಆ ಕಾರಣ ಸದರಿ ಅಪಘಾತವು ಆರೋಪಿಯ ಯಾವುದೇ ಅತಿವೇಗ, ದುಡುಕಿನ ಮತ್ತು ಅಜಾಗರೂಕತೆಯ ಚಾಲನೆಯಿಂದ ಆಗಿರುವುದಿಲ್ಲ. ಆದ್ದರಿಂದ ಆರೋಪಿಯನ್ನು ನಿರಪರಾಧಿ ಎಂದು ನಿರ್ಣಯಿಸಿ ಬಿಡುಗಡೆ ಮಾಡಬೇಕೆಂದು ವಾದವನ್ನು ಮಂಡಿಸಿರುತ್ತಾರೆ.

20. ಕ್ರಿಮಿನಲ್ ಪ್ರಕರಣಗಳಲ್ಲಿನ ರುಜುವಾತಿನ ಹೊಣೆಗಾರಿಕೆಯು ಅಭಿಯೋಜನೆಯ ಮೇಲಿರುತ್ತದೆ. ಸದರಿ ಅಭಿಯೋಜನೆಯು ಆರೋಪಿತನ ವಿರುದ್ಧದ ಆರೋಪಗಳ ಕುರಿತು ಸಂಶಯಾತೀತವಾಗಿ ರುಜುವಾತುಪಡಿಸಬೇಕಾಗುತ್ತದೆ. ಆದರೆ ಆರೋಪಿತನು ತನ್ನ ಪ್ರತಿವಾದ ರಕ್ಷಣೆಯಲ್ಲಿ ಅಪರಾಧಿಕಾ ಕೃತ್ಯ ಸಂಭವಿಸಿದ ಸಮಯದಲ್ಲಿ ತಾನು ಅಪಘಾತ ಸಂಭವಿಸಿದ ಸಮಯದಲ್ಲಿ ಇರಲಿಲ್ಲ ಎಂಬ ಪ್ರತಿರಕ್ಷಣೆಯನ್ನು ತೆಗೆದುಕೊಂಡಿರುವುದಿಲ್ಲ. ಹಾಗಾಗಿ ಅಪಘಾತ ನಡೆದ ಕಾಲಕ್ಕೆ ಆರೋಪಿತನು ಕಾರನ್ನು ಚಾಲನೆ ಮಾಡುತ್ತಿದ್ದನು ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ.

21. ಈ ಮೇಲ್ಕಂಡಂತೆ ಅಭಿಯೋಜನೆ ಪರ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯವನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಈ ಪ್ರಕರಣದ ಫಿರ್ಯಾದುದಾರರು, ಪ್ರತ್ಯಕ್ಷ ಸಾಕ್ಷಿದಾರರ ಸಾಕ್ಷ್ಯಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಮೇಲ್ಕಂಡ ದಿನಾಂಕದಂದು ಅಪಘಾತ ಏರ್ಪಟ್ಟು ಸದರಿ ಅಪಘಾತದ ಪರಿಣಾಮ ರೋಣಿಹಾಳ ಕ್ರಾಸ ಹತ್ತಿರ ನಡೆದುಕೊಂಡು ರಸ್ತೆಯನ್ನು ಕ್ರಾಸ ಮಾಡುತ್ತಿದ್ದ ಚಾಸಾ-**1** ರವರ ತಾಯಿ ಲಕ್ಕಮ್ಮ ಗಂಡ ನಾಗಪ್ಪ ನೇಗಿನಾಳ ರವರ ತಲೆಯ ಹಿಂಬದಿಗೆ ತೀವ್ರ ಸ್ವರೂಪದ ಗಾಯಗಳಾಗಿ ಮರಣ ಹೊಂದಿರುವುದು ನಿ.ಪಿ-11 ಹಾಗೂ ನಿ.ಪಿ-12 ರ ದಾಖಲಾತಿಗಳಿಂದ ಸ್ಪಷ್ಟವಾಗಿ ಕಂಡು ಬರುತ್ತದೆ. ಅಂತೆಯೇ ಅಪಘಾತಕ್ಕೆ ಕಾರಣವಾದ ವಾಹನವನ್ನು ಪರಿಶೀಲಿಸಿ ನೀಡಿರುವ ನಿಶಾನೆ ಪಿ-13 ರ ಐ.ಎಂ.ವಿ. ವರದಿಯನ್ನು ಪರಿಶೀಲಿಸಿದಾಗ ಸದರಿ ವಾಹನಕ್ಕೆ ಅಂದರೆ ವಾಹನ ಸಂಖ್ಯೆ ಕೆಎ-**28/**ಬಿ-**8702** ರ ವಾಹನವನ್ನು ಪರೀಕ್ಷಿಸಿದಾಗ ವಾಹನದ ಮುಂದಿನ ಬಲಗಡೆಯ ಬಾಜು ಹೆಡ ಲೈಟ ಹಾಗೂ ಇಂಡಿಕೇಟರಗಳು ಜಖಂಗೊಂಡಿದ್ದವು. ವಾಹನದ ಮುಂದಿನ ಬಲಗಡೆಯ ಬಾಜು ಬಂಪರ ಜಖಂಗೊಂಡಿತ್ತು ಹಾಗೂ ವಾಹನದ ಬಲಗಡೆಯ ಗಾಲಿಯ ಚಕ್ರವು ಜಖಂಗೊಂಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಹಾಗಾಗಿ ಸದರಿ ಅಪಘಾತವು ವಾಹನದ ಯಾವುದೇ ಯಾಂತ್ರೀಕ ದೋಷದಿಂದ ಉಂಟಾಗಿರುವುದಿಲ್ಲ ಎಂಬುದು ನಿಶಾನೆ ಪಿ.13 ರ ಮೋಟರ ವಾಹನ ಪರೀಕ್ಷಾ ವರದಿಯಿಂದ

ಸ್ಪಷ್ಟವಾಗಿ ಕಂಡು ಬರುತ್ತದೆ. ಅಪಘಾತವು ಆರೋಪಿತನ ತಪ್ಪಿನಿಂದ ಏರ್ಪಟ್ಟಿರುತ್ತದೆ ಎಂಬುದರ ಕುರಿತು ನಿರ್ಣಯಿಸಲು ಅಪಘಾತವನ್ನು ನೋಡಿದ ಬಗ್ಗೆ ಪ್ರತ್ಯಕ್ಷ ಸಾಕ್ಷಿದಾರರ ಸಾಕ್ಷ್ಯವನ್ನು ಪರಿಶೀಲಿಸುವುದು ಬಹಳ ಮುಖ್ಯವಾಗಿರುತ್ತದೆ.

22. ಪ್ರಸ್ತುತ ನ್ಯಾಯಾಲಯದ ಮುಂದಿರುವ ಪ್ರಶ್ನೆ ಸದರಿ ಅಪಘಾತಕ್ಕೆ ಆರೋಪಿತನ ಅತೀವೇಗ ಮತ್ತು ಅಜಾಗರೂಕತೆಯ ಚಾಲನೆಯೇ ಕಾರಣ ಎಂಬುದಾಗಿರುತ್ತದೆ. ಈ ಕುರಿತು ಪರಿಶೀಲಿಸಲಾಗಿ ದೂರುದಾರರು, ಪ್ರತ್ಯಕ್ಷ್ಯ ಹಾಗೂ ಸಾಂಧರ್ಬಿಕ ಸಾಕ್ಷಿದಾರರಾದ ಪ್ರಾ.ಸಾ.1, 4 ರಿಂದ ಪ್ರಾ.ಸಾ.6 ರವರು ತಮ್ಮ ಸಾಕ್ಷ್ಯಗಳಲ್ಲಿ ಸುಮಾರು ಒಂದು ವರ್ಷಗಳ ಹಿಂದೆ ಅಪಘಾತವಾಗಿರುತ್ತದೆ. ಸದರಿ ಪ್ರಕರಣದ ಕುರಿತು ತಮಗೆ ಯಾವುದೇ ಮಾಹಿತಿ ಇಲ್ಲ . ಅಪಘಾತವು ಯಾವ ವಾಹನದಿಂದ , ಹೇಗೆ ಮತ್ತು ಯಾರ ತಪ್ಪಿನಿಂದ ಆಯಿತು ಎಂದು ತಮಗೆ ಗೊತ್ತಿಲ್ಲ ಮತ್ತು ತಾವು ಈ ಕುರಿತು ಪೋಲಿಸರ ಮುಂದೆ ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲ ಎಂದು ಅಭಿಯೋಜನೆ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯಗಳನ್ನು ನುಡಿದಿರುತ್ತಾರೆ.

23. ಈ ಮೇಲಿನ ಪ್ರಾ.ಸಾ-1, 4 ರಿಂದ 6 ರವರ ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಸದರಿ ಸಾಕ್ಷಿದಾರರು ತಮ್ಮ ಸಾಕ್ಷ್ಯಗಳಲ್ಲಿ ಆರೋಪಿಯ ನಿರ್ಲಕ್ಷ್ಯತನದಿಂದ ಅಪಘಾತವಾಗಿರುತ್ತದೆ ಎಂಬುದರ ಕುರಿತು ಸಾಕ್ಷ್ಯವನ್ನು ನುಡಿಯದೇ ಅಭಿಯೋಜನೆ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ . ಹಾಗಾಗಿ ಅಪಘಾತವು ಆರೋಪಿತನ ನಿರ್ಲಕ್ಷ್ಯತನದ ಚಾಲನೆಯಿಂದ ಆಗಿರುತ್ತದೆ ಎಂಬುದರ ಕುರಿತು ಸಂಶಯವನ್ನುಂಟು ಮಾಡುತ್ತದೆ.

24. ಪ್ರಾ.ಸಾ.1, 4 ರಿಂದ 6 ರವರು ದೂರುದಾರರು, ಸಾಂಧರ್ಬಿಕ , ಪ್ರತ್ಯಕ್ಷ ಹಾಗೂ ಮಹಜರ ಸಾಕ್ಷಿದಾರರಾಗಿರುತ್ತಾರೆ. ಈ ಎಲ್ಲಾ ಸಾಕ್ಷಿದಾರರ ಸಾಕ್ಷ್ಯಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಸದರಿ ಸಾಕ್ಷಿದಾರರು ಸದರಿ ಅಪಘಾತವು ಆರೋಪಿತನ ಅತಿವೇಗ, ದುಡುಕಿನ ಮತ್ತು ಅಜಾಗರೂಕತೆಯ ಚಾಲನೆಯಿಂದ ಅಪಘಾತವಾಗಿರುತ್ತದೆ ಎಂಬುದರ ಬಗ್ಗೆ ಯಾವುದೇ ಒಬ್ಬ ಸಾಕ್ಷಿದಾರರು ಕೂಡಾ ಸಾಕ್ಷ್ಯವನ್ನು ನುಡಿದಿರುವುದು ಕಂಡು ಬರುವುದಿಲ್ಲ.

25. ಅಭಿಯೋಜನೆಯು ವಿಚಾರಣೆಗೆ ಒಳಪಡಿಸಿದ ಸಾಕ್ಷಿದಾರರಾದ ಪ್ರಾ.ಸಾ1 ರಿಂದ 6 ರವರು ಅಪಘಾತವು ಯಾರ ತಪ್ಪಿನಿಂದ ಮತ್ತು ಹೇಗೆ ಆಯಿತು ಎಂದು ತಮಗೆ ಗೊತ್ತಿಲ್ಲ ಎಂದು ಅಭಿಯೋಜನೆ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿ ಸಾಕ್ಷಿದಾರರು ಯಾರೂ ಕೂಡಾ ಅಪಘಾತವು ಆರೋಪಿತನು ವಾಹನವನ್ನು ಅತಿವೇಗ, ದುಡುಕಿನ ಮತ್ತು ಅಜಾಗರೂಕತೆಯ ಚಾಲನೆಯಿಂದ ಆಗಿರುತ್ತದೆ ಎಂಬುದರ ಬಗ್ಗೆ ಸಾಕ್ಷ್ಯ ನುಡಿದಿರುವುದಿಲ್ಲ ಎಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ. ಈ ಮೇಲ್ಕಂಡ ಅಂಶಗಳನ್ನು ಪರಿಗಣಿಸಿದಾಗ ಅಭಿಯೋಜನೆಯ ಸಾಕ್ಷಿದಾರರು ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಯಾರೂ ಕೂಡಾ ಸಾಕ್ಷ್ಯವನ್ನು ನುಡಿಯದೇ ಇರುವುದರಿಂದ ಆರೋಪಿತನು ವಾಹನವನ್ನು ಅತೀವೇಗ, ದುಡುಕಿನ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಲಕ್ಕಮ್ಮ ಗಂಡ ನಾಗಪ್ಪ ನೇಗಿನಾಳ ಇವಳಿಗೆ ಹಾಯಿಸಿ ಅಪಘಾತ ಪಡಿಸಿ ಅವಳ ತಲೆಯ ಹಿಂಬದಿಗೆ ತೀವ್ರ ಸ್ವರೂಪದ ಗಾಯಗಳಾಗಿ ಮರಣ ಹೊಂದಿರುತ್ತಾರೆ ಎಂಬ ಅಂಶವನ್ನು ಸಂಶಯಾತೀತವಾಗಿ ಅಭಿಯೋಜನೆಯವರು ರುಜುವಾತುಪಡಿಸಿರುವುದಿಲ್ಲ ಎಂಬುದು ಸ್ಪಷ್ಟವಾಗಿ ನ್ಯಾಯಾಲಯಕ್ಕೆ ಕಂಡುಬರುತ್ತದೆ.

26. ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ ಅಪಘಾತದಲ್ಲಿ ಮೃತ ಲಕ್ಕಮ್ಮ ಗಂಡ ನಾಗಪ್ಪ ನೇಗಿನಾಳರವರಿಗೆ ತೀವ್ರ ಸ್ವರೂಪದ ಗಾಯಗಳಾಗಿ ಸ್ಥಳದಲ್ಲಿ ಮರಣ ಹೊಂದಿರುವುದು ಸ್ಪಷ್ಟವಾದ ಸಂಗತಿಯಾಗಿರುತ್ತದೆ. ಆದರೆ ಸದರಿ ಮೇಲ್ಕಂಡ ಅಪಘಾತಕ್ಕೆ ಆರೋಪಿತನು ವಾಹನವನ್ನು ಅತೀವೇಗ, ದುಡುಕಿನ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಲಕ್ಕಮ್ಮ ಗಂಡ ನಾಗಪ್ಪ ನೇಗಿನಾಳ ಇವಳಿಗೆ ಹಾಯಿಸಿ ಅಪಘಾತ ಪಡಿಸಿ ಅವಳ ತಲೆಯ ಹಿಂಬದಿಗೆ ತೀವ್ರ ಸ್ವರೂಪದ ಗಾಯಗಳಾಗಿ ಮರಣ ಹೊಂದಿರುತ್ತಾರೆ ಎಂಬುದನ್ನು ಸಂಶಯಾತೀತವಾಗಿ ಸಾಬೀತುಪಡಿಸಲು ಅಭಿಯೋಜನೆಯು ವಿಫಲವಾಗಿರುತ್ತದೆ. ಆದ್ದರಿಂದ ಸದರಿ ಸಂಶಯದ ಲಾಭವನ್ನು ಪಡೆಯಲು ಆರೋಪಿತನು ಅರ್ಹನೆಂದು ಪರಿಗಣಿಸಿ ಈ ಮೇಲ್ಕಂಡ ಅಂಶ ಸಂಖ್ಯೆ 1 ಮತ್ತು 2 ನ್ನು ನಕಾರಾತ್ಮಕ ಎಂದು ನಿರ್ಣಯಿಸಲಾಗಿರುತ್ತದೆ.

27. ಅಂಶ ಸಂಖ್ಯೆ **3** ಮತ್ತು **4:** ಆರೋಪಿತನು ಅಪಘಾತದ ಸಮಯದಲ್ಲಿ ಚಾಲನಾ ಪರವಾನಗಿಯನ್ನು ಹೊಂದಿರಲಿಲ್ಲ ಹಾಗೂ ತಾನು ಚಾಲನೆ ಮಾಡುವ ವಾಹನಕ್ಕೆ ವಿಮೆ ಪಾಲಸಿ ಮಾಡಿಸಿರುವುದಿಲ್ಲ ಎಂಬುದು ಆರೋಪಿತನ ವಿರುದ್ಧದ ಆಪಾದನೆಗಳಾಗಿರುತ್ತವೆ.

ಈ ಕುರಿತು ಪರಿಶೀಲಿಸಲಾಗಿ ಆರೋಪಿತನು ಚಾಲನಾ ಪರವಾನಗಿಯನ್ನು ಹೊಂದಿರುವ ಕುರಿತು ಹಾಗೂ ತಾನು ನಡೆಸುವ ವಾಹನಕ್ಕೆ ವಿಮಾ ಪಾಲಸಿ ಹೊಂದಿರುವ ಕುರಿತು ಆರೋಪಿತನು ತನಿಖಾಧಿಕಾರಿಗೆ ದಾಖಲಾತಿಗಳನ್ನು ನೀಡಿರುವುದಿಲ್ಲ. ಅಲ್ಲದೇ ಆರೋಪಿತನು ಸದರಿ ಪರವಾನಗಿಯನ್ನು ಹೊಂದಿದ್ದಲ್ಲಿ ಹಾಗೂ ವಾಹನಕ್ಕೆ ವಿಮಾ ಪಾಲಸಿ ಹೊಂದಿದ್ದಲ್ಲಿ ಅವುಗಳನ್ನು ತನಿಖಾಧಿಕಾರಿ ಹಾಗೂ ನ್ಯಾಯಾಲಯಕ್ಕೆ ಹಾಜರುಪಡಿಸುವುದು ಆತನ ಜವಾಬ್ದಾರಿಯಾದ್ದರು ಸಹ ಆರೋಪಿತನು ಹಾಜರುಪಡಿಸಿರುವುದಿಲ್ಲ. ಹಾಗಾಗಿ ಆರೋಪಿತನು ಅಪಘಾತ ಸಂಭವಿಸಿದ ದಿನದಂದು ಯಾವುದೇ ರೀತಿಯಲ್ಲಿ ಚಾಲನಾ ಪರವಾನಗಿ ಹೊಂದಿರಲಿಲ್ಲ ಹಾಗೂ ವಿಮಾ ಪಾಲಸಿ ಹೊಂದಿರುವುದಿಲ್ಲವೆಂದು ನ್ಯಾಯಾಲಯವು ನಿರ್ಣಯಕ್ಕೆ ಬರುತ್ತದೆ. ಈ ಮೇಲ್ಕಂಡ ವಿಶ್ಲೇಷಣೆಯಿಂದಾಗಿ ಅಂಶ ಸಂಖ್ಯೆ 3 ಮತ್ತು 4 ನ್ನು ಸಕಾರಾತ್ಮಕವೆಂದು ನಿರ್ಣಯಿಸಲಾಗಿರುತ್ತದೆ.

28. ಅಂಶ ಸಂಖ್ಯೆ **5-** ಮೇಲೆ ಚರ್ಚಿಸಿದ ಎಲ್ಲಾ ಕಾರಣಗಳಿಂದ ಈ ಕೆಳಗಿನಂತೆ ಆದೇಶಿಸಿರುತ್ತೇನೆ.

ಆ ದೇ ಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ.255(1) ರ ಅಡಿಯಲ್ಲಿ ಕಾರ್ಯೋನ್ಮುಖನಾಗಿ, ಆರೋಪಿಯನ್ನು ಆತನ ವಿರುದ್ದ ಹೊರಿಸಿದ ಭಾರತೀಯ ನ್ಯಾಯ ಸಂಹಿತೆ ಕಲಂ 281 ಹಾಗೂ 106(1) ರ ಅಡಿಯಲ್ಲಿಯ ಆರೋಪಗಳಿಗಾಗಿ ನಿರಪರಾಧಿ ಎಂದು ನಿರ್ಣಯಿಸಲಾಗಿದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ.255(2) ರ ಅಡಿಯಲ್ಲಿ ಕಾರ್ಯೋನ್ಮುಖನಾಗಿ, ಆರೋಪಿಯನ್ನು ಆತನ ವಿರುದ್ಧ ಹೊರಿಸಿದ ಭಾರತೀಯ ಮೋಟಾರ್ ವಾಹನ ಕಾಯಿದೆ ಕಲಂ: 3 ಸಹಕಲಂ 181 ಹಾಗೂ ಕಲಂ: 146 ಸಹಕಲಂ:196 ರ ಅಡಿಯಲ್ಲಿನ ಆರೋಪಕ್ಕಾಗಿ ಅಪರಾಧಿ ಎಂದು ನಿರ್ಣಯಿಸಲಾಗಿದೆ.

ಭಾರತೀಯ ಮೋಟಾರ್ ವಾಹನ ಕಾಯಿದೆ ಕಲಂ: 3 ಸಹ ಕಲಂ.181 ರ ಆರೋಪಕ್ಕಾಗಿ ಅಪರಾಧಿಗೆ ರೂ.5,000/- ದಂಡವನ್ನು ವಿಧಿಸಲಾಗಿರುತ್ತದೆ.

ಮೇಲ್ಕಂಡ ದಂಡವನ್ನು ಪಾವತಿಸಲು ಅಪರಾಧಿಯು ವಿಫಲನಾದಲ್ಲಿ ಅಪರಾಧಿಗೆ ಒಂದು ತಿಂಗಳ ಸಾದಾ ಸಜೆಯನ್ನು ವಿಧಿಸಲಾಗಿದೆ.

ಭಾರತೀಯ ಮೋಟಾರ್ ವಾಹನ ಕಾಯಿದೆ ಕಲಂ:146 ಸಹ ಕಲಂ.196 ರ ಆರೋಪಕ್ಕಾಗಿ ಅಪರಾಧಿಗೆ ರೂ.2,000/- ದಂಡವನ್ನು ವಿಧಿಸಲಾಗಿರುತ್ತದೆ.

ಮೇಲ್ಕಂಡ ದಂಡವನ್ನು ಪಾವತಿಸಲು ಅಪರಾಧಿಯು ವಿಫಲನಾದಲ್ಲಿ ಅಪರಾಧಿಗೆ ಒಂದು ತಿಂಗಳ ಸಾದಾ ಸಜೆಯನ್ನು ವಿಧಿಸಲಾಗಿದೆ.

ಈ ತೀರ್ಪಿನ ಪ್ರತಿಯನ್ನು ಆರೋಪಿತನಿಗೆ ಉಚಿತವಾಗಿ ನೀಡಲು ಕಛೇರಿಗೆ ಸೂಚಿಸಲಾಗಿದೆ.

ಈ ಪ್ರಕರಣದಲ್ಲಿ ಆರೋಪಿ ಮತ್ತು ಆತನ ಜಾಮೀನುದಾರರು ದಂ.ಪ್ರ.ಸಂ. ಕಲಂ 437(ಎ)ರ ಅಡಿಯಲ್ಲಿ ಬರೆದುಕೊಟ್ಟಂತಹ ಜಾಮೀನು ಮುಚ್ಚಳಿಕೆಗಳು ಈ ತೀರ್ಪು ಉದ್ಘೋಷಿಸಿದ ದಿನದಿಂದ 6 ತಿಂಗಳವರೆಗೆ ಚಾಲ್ತಿಯಲ್ಲಿರುತ್ತದೆ ಹಾಗೂ ಸದರಿ ಅವಧಿಯಲ್ಲಿ ಮೇಲ್ಮನವಿ ಪ್ರಾಧಿಕಾರದಿಂದ ಯಾವುದೇ ಸೂಚನೆ ಬರದೇ ಇದ್ದ ಪಕ್ಷದಲ್ಲಿ ಸದರಿ ಜಾಮೀನು ಮುಚ್ಚಳಿಕೆಗಳು ಸ್ವಯಂಚಾಲಿತವಾಗಿ ರದ್ದಾಗತಕ್ಕದ್ದು.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ: 19 ನೇ ಜೂನ 2026 ರಂದು ನಾನು ಉದ್ಘೋಷಿಸಿದ್ದೇನೆ.)

(ಈರಪ್ಪ ಢವಳೇಶ್ವರ)
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಬಸವನ ಬಾಗೇವಾಡಿ

<u>ಅನುಬಂಧ</u>

<u>ಅಭಿಯೋಜನೆ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:-</u>
ಪ್ರಾ.ಸಾ.1-ಸಿದ್ದವ್ವ ಹುಲ್ಲಪ್ಪ ಕಳಗೊಂಡ
ಪ್ರಾ.ಸಾ.2-ಆನಂದ ಉಮೇಶ ಸುನಗದ
ಪ್ರಾ.ಸಾ.3-ಶಿವಾನಂದ ತುಳಜಪ್ಪ ಕೋಲಕಾರ
ಪ್ರಾ.ಸಾ.4-ಪದಮ್ಮಣ್ಣ ನಾಗಪ್ಪ ನೇಗಿನಾಳ
ಪ್ರಾ.ಸಾ.5- ಸಂಗಪ್ಪ ಮುದಕಪ್ಪ ಮಾದರ
ಪ್ರಾ.ಸಾ.6-ಗಂಗಪ್ಪ ಹುಲ್ಲಪ್ಪ ಕಳಗೊಂಡ

<u>ಅಭಿಯೋಜನೆ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:-</u>

| | | |
|---|---|---|
| ನಿಪಿ-1 | : | ದೂರು |
| ನಿಪಿ-2 | : | ಅಪಘಾತ ನಡೆದ ಸ್ಥಳದಲ್ಲಿ ಜರುಗಿಸಿದ ಮಹಜರು ಪ್ರಕ್ರಿಯೆ |
| ನಿಪಿ-3 | : | ವಾಹನ ಅಮಾನತ್ತು ಮಹಜರ |
| ನಿಪಿ-4-7 | : | ಛಾಯಾ ಚಿತ್ರಗಳು |
| ನಿಪಿ-8 | : | ಪ್ರಾಸಾ-4 ರವರು ಅಲ್ಲಗಳೆದ ಹೇಳಿಕೆ ಭಾಗ |
| ನಿಪಿ-9 | | ಪ್ರಾಸಾ-5 ರವರು ಅಲ್ಲಗಳೆದ ಹೇಳಿಕೆ ಭಾಗ |
| ನಿಪಿ-10 | | ಪ್ರಾಸಾ-6 ರವರು ಅಲ್ಲಗಳೆದ ಹೇಳಿಕೆ ಭಾಗ |
| ನಿಪಿ-11 | : | ಶವ ಪಂಚನಾಮೆ |
| ನಿಪಿ-12 | | ಶವ ಪರೀಕ್ಷಾ ವರದಿ |
| ನಿಪಿ-13 | : | ಮೋಟರ ವಾಹನ ಪರೀಕ್ಷಾ ವರದಿ |

<u>ಆರೋಪಿ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:-</u> - ಇಲ್ಲ

<u>ಆರೋಪಿ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:-</u> - ಇಲ್ಲ -

<u>ಅಭಿಯೋಜನೆ ಪರ ಗುರುತು ಮಾಡಲ್ಪಟ್ಟ ಮುದ್ದೆ ಮಾಲುಗಳು:-</u> - ಇಲ್ಲ -

**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಬಸವನ ಬಾಗೇವಾಡಿ